ಪಿಡಬ್ಲೂ - 2

**ದಿಃ 15.12.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ-** ಶ್ರೀ.ಹೆಚ್. ಎಸ್. ವಿ. ನ್ಯಾಯವಾದಿಗಳಿಂದಃ-

ನಾನು ಮುಗ್ಗಿದ ರಾಗಿಹಳ್ಳಿಯಲ್ಲಿ ಹುಟ್ಟಿನಿಂದಲೂ ವಾಸವಿರುತ್ತೇನೆ. ಸದರಿ ದಾವೆಯನ್ನು ವಾದಿಯು ಮಲ್ಲಿಕಾರ್ಜುನಪ್ಪ ಅವರು ವಾದಿಗೆ ಸೇರಿದ ಜಮೀನಿನಲ್ಲಿ ಮನೆ ಕಟ್ಟಿರುತ್ತಾರೆ ಎಂದು ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ. 1 ನೇ ಪ್ರತಿವಾದಿ ದಾವ ಸ್ವತ್ತಿನಲ್ಲಿ ದೌರ್ಜನ್ಯದಿಂದ ಅತಿ ಕ್ರಮವಾಗಿ ಮನೆ ಕಟ್ಟಿರುವುದನ್ನು ನಾನು ನೋಡಿರುತ್ತೇನೆ. ದಾವ ಸ್ವತ್ತನ್ನು ತಹಶಿಲ್ದಾರ್ ಅವರು ಸರ್ವೆ ಮಾಡುವ ಕಾಲಕ್ಕೆ ನಾನು ಹಾಜರಿದ್ದೇನು. ಆದರೆ ಅಳತೆ ಮಾಡಿದ ಮಹಜರ್- ನಿ.ಪಿ. 8 ಕ್ಕೆ ಸಹಿ ಮಾಡಿರುವುದಿಲ್ಲ. ನಾನು ಸರ್ವೆ ಮಾಡುವ ಕಾಲಕ್ಕೆ ಹಾಜರು ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ಎಷ್ಟು ಒತ್ತುವರಿ ಮಾಡಿರುತ್ತಾರೆ ಎಂದು ಸರ್ವೆಯವರು ನಮೂದು ಮಾಡಿರುವ ಬಗ್ಗೆ ನಾನು ನೋಡಿರುವುದಿಲ್ಲ. 1 ನೇ ಪ್ರತಿವಾದಿ ಮಲ್ಲಿಕಾರ್ಜುನ ದಾವ ಸ್ವತ್ತಿನಲ್ಲಿ ಯಾವುದೇ ಒತ್ತುವರಿ ಮಾಡದೇ ಇದ್ದರೂ ಸಹ ವಾದಿ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮಲ್ಲಿಕಾರ್ಜುನಪ್ಪ ನವರು ದಾವ ಸ್ವತ್ತಿನ ಪಶ್ಚಿಮ ಭಾಗದಲ್ಲಿ 18 X 20 ಅಡಿ ವಿಸ್ತೀರ್ಣದ ಜಮೀನನ್ನು ಒತ್ತುವರಿ ಮಾಡಿ ಮನೆ ಕಟ್ಟಿರುತ್ತಾರೆ. ಬೇಸ್ ಮೆಂಟ್ ನ್ನು ಯಾರು ಹಾಕಿರುವುದಿಲ್ಲ. ವಾದಿಗೆ ಸೇರಿದ ಜಮೀನು ಯಾವುದು ಎಂದು ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು, ಜಗಳೂರು